## ಕಳೆದ ಸಂಚಿಕೆಯಲ್ಲಿ



ಜಯಂತಿಯ ಉಪಚಾರದಲ್ಲಿ ರಾಯರು ಚೇತರಿಸಿಕೊಂಡರು. ಊರಿನಿಂದ ಬಂದ ಪತ್ನಿಯ ಕರೆಗೆ ಅಳುಕುತ್ತಲೇ ಉತ್ತರಿಸಿದ ಅವರು, ಜಯಂತಿ ಮನೆಗೆ ಒಂದು ದಿನ ಹೋಗಿಬರುವುದಾಗಿ ಪತ್ನಿಗೆ ಹೇಳಿದರು. ಒಪ್ಪಿಕೊಂಡ ಸರೋಜಮ್ಮನವರು, ರಾತ್ರಿ ಮಾತ್ರ ಅಲ್ಲಿ ಉಳಿಯಬಾರದೆಂದು ಸ್ಪಷ್ಟವಾಗಿ ಹೇಳಿದರು. ಈ ನಡುವೆ ಸದಾಶಿವ ಶೆಟ್ಟರು ಫೋನ್ ಮಾಡಿ, ರಾಯರ ಮನೆಗೆ ಬಂದು ಬೆದರಿಕೆ ಹಾಕಿದ ಪುಂಡರ ಹಿಂದಿನ ರಹಸ್ಯ ಬಯಲಾದುದರ ಬಗ್ಗೆ ತಿಳಿಸಿದರು. ಆ ಬೆದರಿಕೆಯ ಹಿಂದೆ ಶೆಟ್ಟರ ಅಣ್ಣನದೇ ಕೈವಾಡವಿತ್ತು. ಪೂರ್ಣ ಸುಧಾರಿಸಿಕೊಂಡ ರಾಯರು, ಆಯುಷಿ ಬಳಿಗೆ ಹೋಗಲು ಇನ್ನೂ ಸಮಯ ಇದ್ದುದರಿಂದ ತಮ್ಮ ಪರಿಚಿತರನ್ನು ಭೇಟಿ ಮಾಡಿ ಬಂದರು. ಮರುದಿನ, ಜಯಂತಿಯೊಂದಿಗೆ ಆಯುಷಿಯ ಮನೆಗೆ ಬಂದರು. ಯುವ ದಂಪತಿಗಳ ದಾಂಪತ್ಯದ ಚೆಲುವನ್ನು ನೋಡಲು ಬರಬೇಕಾಗಿದ್ದವರು, ವಿರಸದ ಸನ್ನಿವೇಶದಲ್ಲಿ ಬಂದುದಕ್ಕೆ ಬೇಸರಿಸಿಕೊಂಡರು. ಆಯುಷಿಯ ಗಂಡ ಸಂಜೀವ ರಾಯರು ಬಿಗುಮಾನವಿಲ್ಲದೆ ಎದುರಾದುದು ರಾಯರನ್ನು ಕೊಂಚ ನಿರಾಳರನ್ನಾಗಿಸಿತು.

ದಿನಗಳ ಮೇಲೆ ನಾವು ರಾತ್ರೆ ದೂರವಾಣಿಯಲ್ಲಿ ಮಾತನಾಡಿಕೊಳ್ಳಲಿಕ್ಕೆ ಹತ್ತಿದ್ದು' ಎಂದು ವಿವರಣೆ ನೀಡಿ, 'ಇಷ್ಟರಲ್ಲೇ ಆಕೆಯನ್ನೇ ಮದುವೆಯಾಗಬೇಕು ಎಂದು ನನಗೆ ಅನಿಸತೊಡಗಿತ್ತು. ಅದರ ಹಿಂದೆ ಸೆಕ್ಸ್ ಇಲ್ಲ ಅನ್ನಲಾರೆ. ಆದರೆ ಅದೊಂದೇ ಕಾರಣ ಅಲ್ಲ. ಈಗಲೂ ಅಷ್ಟೇ, ನಾನು ಆಕೆಗೆ ವಿಚ್ಛೇದನ ನೀಡುವುದಿಲ್ಲ ಎಂಬ ಆರೋಪ ಇದೆ ತಾನೇ? ಅದು ನಿಮಗೂ ತಿಳಿದದ್ದೆ. ವಾಸ್ತವವಾಗಿ ಈಗಲೂ ನನಗೆ ಆಕೆ ಬೇಕು. ಆದರೆ ನಾನು ಆಕೆಗೆ ಬೇಡ ಎನ್ನುವಂತಾದದ್ದು ಯಾಕೆ ಎಂದು ನನಗೆ ಅರ್ಥವಾಗುತ್ತಿಲ್ಲ' ಎಂದರು.

ರಾಯರು ತುಸು ಗಂಭೀರವಾಗಿ, 'ಮಿ. ಸಂಜೀವರಾವ್, ಯಾರೇ ಆಗಲಿ ಮದುವೆ ಎನ್ನುವುದನ್ನು ಒಪ್ಪಿಕೊಳ್ಳುವುದು ಶೋಕಿಗಾಗಿ ಅಲ್ಲ ಅಥವಾ ಮಕ್ಕಳನ್ನು ಹುಟ್ಟಿಸಬೇಕು, ನಮ್ಮ ವಂಶ ಮುಂದುವರಿಯಬೇಕು ಎನ್ನುವುದಕ್ಕೂ ಅಲ್ಲ! ಇವೆಲ್ಲ ಸೆಕೆಂಡರಿ ಎಂದು ನನ್ನ ಭಾವ. ನನ್ನ ದೃಷ್ಟಿಯಲ್ಲಿ ಮದುವೆ ಅನ್ನುವುದು ಇರುವುದು ವಿರುದ್ಧ ಲಿಂಗಿಗಳ ಲೈಂಗಿಕ ಅವಶ್ಯಕತೆಗೆ ಒಂದು ಒಪ್ಪಂದ, ಅಂದರೆ ಕೊಡುವ ಮತ್ತು ಕೊಳ್ಳುವ ಪ್ರಕ್ರಿಯೆಯಲ್ಲಿ ಸಮಾನತೆಯನ್ನು ಕಂಡುಕೊಳ್ಳಲು ಅಥವಾ ಒಪ್ಪಿಕೊಳ್ಳಲು! ಆದರೆ ನಾನೂ ಸೇರಿದಂತೆ ಬಹುತೇಕ ಗಂಡಸರಿಗೆ ಹೆಂಡತಿ ಅಥವಾ ಹೆಣ್ಣು ಅಂತ ಇರುವುದು ತನಗೆ ಲೈಂಗಿಕ ಸುಖ ನೀಡಲಿಕ್ಕೆ ಎಂಬ ಭಾವ ಇರುವುದು ಸುಳ್ಳಲ್ಲ. ಉಳಿದದ್ದೆಲ್ಲ ಗೌಣ ಎನ್ನುವುದು ನಿಜವಾದ ಸತ್ಯ. ಆಡಂಬರಕ್ಕಾಗಿ ನಾವು ವೇದಿಕೆಯಲ್ಲಿ ಈ ನನ್ನ ಚಿಂತನೆಯ ಆಚೆಯದ್ದನ್ನು ಹೇಳಬಹುದು ಅಥವಾ ತಾರ್ಕಿಕವಾಗಿ ವಾದಿಸಬಹುದು' ಎಂದರು. ರಾಯರ ಈ ಅಭಿಪ್ರಾಯಕ್ಕೆ ಸಂಜೀವರಾಯರು ಯಾವ ಪ್ರತಿಕ್ರಿಯೆಯನ್ನೂ ನೀಡದೇ ಮೌನವಾಗಿರುವುದನ್ನು ಗಮನಿಸಿದ ರಾಯರು ಮತ್ತೆ ಪ್ರಾರಂಭಿಸಿ, 'ಗಂಡಸರು ಹೀಗೆ ಯೋಚಿಸುವುದು ತಪ್ಪು ಎನ್ನುವ ಭಾವವನ್ನು ನಾವು ಹೊಂದಿದ್ದೇವಾದರೂ, ಆಶ್ಚರ್ಯ ಅಂದರೆ ಈ ನಿಲುವಿಗೆ ನಮ್ಮ ಹೆಣ್ಮಕ್ಕಳ ಒಪ್ಪಿಗೆಯೂ ಇದ್ದ ಹಾಗೆ ಇದೆ!' ಎಂದು ನಕ್ಕರು.

ಸಂಜೀವರಾಯರಿಗೆ ಮತ್ತೂ ಮಾತನಾಡಲಾಗಲಿಲ್ಲ. ಅವರ ಮೌನವನ್ನು ನೋಡಿದ ರಾಯರು, 'ಅದೆಲ್ಲ ಇರಲಿ. ನಿಮ್ಮ ಮೊದಲ ರಾತ್ರೆಯ ಅನುಭವ ಹೇಗಿತ್ತು ಎಂದು ನಾನು ಕೇಳುವುದು ನಿಮ್ಮ ಮುಜುಗರಕ್ಕೆ ಕಾರಣವಾಗದಿದ್ದರೆ ಹೇಳಿ?' ಎಂದರು.

ಸಂಜೀವರಾಯರು 'ಮುಜುಗರ ಇಲ್ಲದೆ ಖಂಡಿತ ಹೇಳುತ್ತೇನೆ ಸರ್' ಎಂದು ಗಂಭೀರವಾಗಿ, 'ನಾವು ಮೊದಲ ರಾತ್ರೆಯಲ್ಲಿ ಸಂಭೋಗದ ಪ್ರಯತ್ನಕ್ಕೆ ಇಳಿಯಲೇ ಇಲ್ಲ. ಇಳಿಯಬಾರದು ಎಂದು ಎಲ್ಲೋ ಓದಿದ್ದನ್ನು ನೆನಪಿಸಿಕೊಂಡು ಸುಮ್ಮನೆ ಇದ್ದೆವು. ಆದರೆ ಪರಸ್ಪರ ಅಪ್ಪಿಕೊಳ್ಳುವುದು, ಚುಂಬಿಸುವುದು ಇಷ್ಟಕ್ಕೆ ಸೀಮಿತವಾಗಿದ್ದೆವು. ನಾಲ್ಕು ದಿನ ಈ ಸ್ಥಿತಿಯಲ್ಲೇ ನಾವು ಮುಂದುವರಿದ ಮೇಲೆ ನಾನು ಮುಂದುವರಿಯಲೇ ಎಂಬಂತೆ ಅವಳ ಕಿವಿಯಲ್ಲಿ 'ಒಪ್ಪಿಗೆ ಇದೆಯೇ?' ಎಂಬಂತೆ ಪಿಸುಗುಟ್ಟಿದೆ. 'ಹ್ಞೂ' ಎಂದು ಆಕೆ ಹೇಳದಿದ್ದರೂ ನನ್ನ ತುಟಿಯನ್ನು ತನ್ನ ತುಟಿಯೊಳಗೆ ಆಕೆ ಎಳೆದುಕೊಂಡದ್ದು ನೋಡಿ ನಾನು ಉದ್ರೇಕಗೊಂಡೆ. ನಿಧಾನವಾಗಿ ಅವಳೊಳಗೆ ಇಳಿಯಲು ನಾನು ಪ್ರಯತ್ನಿಸುವಷ್ಟರಲ್ಲಿ ಆಶ್ಚರ್ಯ ಎಂಬಂತೆ ನನ್ನ ಉದ್ರೇಕವು ಜರ್‍ರನೆ ಇಳಿದುಹೋಯಿತು. ಇದು ಯಾಕೆ ಏನು ಎನ್ನುವಷ್ಟರಲ್ಲಿ ಅವಳು ನನ್ನನ್ನು ತನ್ನ ತೋಳುಗಳ ಬಂಧನದಿಂದ ಬಿಡುಗಡೆಗೊಳಿಸಲು ಸಿದ್ಧಳಿಲ್ಲ ಎಂಬಂತಿದ್ದಳು. ನನಗೆ ಈ ಅವಸ್ಥೆ ಯಾಕೆ ಆಯಿತು ಎಂದು ಆತಂಕ ಅಥವಾ ತಲ್ಲಣವಾಗಿ ನಾಚಿಕೆಯಾಯಿತು. 'ಇಲ್ಲ, ನಾನು ಇವಳನ್ನು ಭೋಗಿಸಲಾರೆ' ಎನ್ನುವುದು ಆಗ ನನ್ನ ಮನಸ್ಸಿಗೆ ಬಂದು ನಾನು ಮುಜುಗರದಿಂದ ಅವಳನ್ನು ಪಕ್ಕಕ್ಕೆ ಸರಿಸಿ ಹಾಸಿಗೆಯಲ್ಲಿ ಬಿದ್ದುಕೊಂಡೆ. ಆಕೆ ಸ್ವಲ್ಪ ಹೊತ್ತು ಸುಮ್ಮನಿದ್ದು ಆಮೇಲೆ ನನ್ನ ಕಿವಿಯಲ್ಲಿ ತನ್ನ ತುಟಿ ಇಟ್ಟು 'ಮತ್ತೆ ನೀವು ಪ್ರಯತ್ನಿಸಬಾರದೇಕೆ?' ಎಂದಳು. ನಾನು 'ನೋಡೋಣ' ಎಂದು ಮತ್ತೆ ಪ್ರಯತ್ನಿಸಲು ಹೊರಟರೆ ಉದ್ರೇಕವೇ ಆಗಲಿಲ್ಲ. ಇದರಿಂದ ನನ್ನಲ್ಲಿ ಆತಂಕ ಇನ್ನಷ್ಟು ಹೆಚ್ಚಾಯಿತು. ನಾನು ತೀವ್ರ ಆತಂಕದಿಂದ ಹಾಸಿಗೆಯಲ್ಲಿ ಬಿದ್ದುಕೊಂಡೆ. ಅವಳು ತುಂಬಾ ನಿರಾಶೆಯಿಂದ ನನಗೆ ಬೆನ್ನು ಹಾಕಿ ಮಲಗಿದಳು. ಮರುದಿನ ಬೆಳಗ್ಗೆ ಈ ವಿಷಯವನ್ನು ಮಾತನಾಡಲು ಇಬ್ಬರಲ್ಲೂ ಆಸಕ್ತಿ ಇರಲಿಲ್ಲ.

ನಾವು ನಾಲ್ಕೈದು ದಿನ ಬಿಟ್ಟು ಮತ್ತೆ ಈ ಪ್ರಯತ್ನವನ್ನು ಮುಂದುವರಿಸಿದೆವು. 'ಇಲ್ಲ ಈ ಸಲ ಆಗಿಯೇ ಆಗುತ್ತದೆ' ಎನ್ನುವಾಗ ಅದೇ ಹಿಂದಿನ ಅನುಭವ ನನಗಾಗತೊಡಗಿತು. ಇದರಿಂದ ನನಗೆ ತುಂಬಾ ನಿರಾಶೆ ಆದ ಹಾಗೇ ಅವಳಿಗೂ ಆಗತೊಡಗಿತು. ನಾವು ಮದುವೆಯಾಗಿ ಮೂರು ನಾಲ್ಕು ತಿಂಗಳಾಗುವಾಗ ನಾನು ಗಂಡಸಲ್ಲವೇ ಎಂದು ನನಗೆ ನಾನೇ ಕೇಳಿಕೊಂಡೆ. ಇದಕ್ಕಾಗಿ ಮಾರ್ಗದರ್ಶನ ಪಡೆಯೋಣ ಅಂದರೆ ಇಂಥ ವಿಚಾರದಲ್ಲಿ ತಜ್ಞರು ಸಿಗುವುದು ಕಷ್ಟ ಎಂದುಕೊಂಡರೂ, ತಿಂಗಳ ಮೇಲೆ ನಮ್ಮ ಫ್ಯಾಮಿಲಿ ಡಾಕ್ಟರನ್ನು ಸಂಪರ್ಕಿಸಿದೆ. ರೋಗಿಗಳಿಲ್ಲದ ಸಮಯದಲ್ಲಿ ಈ ವಿಚಾರವನ್ನು ಅವರಲ್ಲೂ ತಿಳಿಸಿದೆ. ಅವರು 'ಈ ಹಿಂದೆ ನೀವು ಸೂಳೆಯರ ಸಂಗ ಮಾಡಿದ್ದಿದೆಯಾ? ಮುಷ್ಠಿಮೈಥುನದ ಅಭ್ಯಾಸ ನಿಮಗಿದೆಯಾ?' ಇತ್ಯಾದಿ ಪ್ರಶ್ನೆ ಕೇಳಿದಾಗ ನನಗೆ ಇವರಿಗೆ ಲೈಂಗಿಕ ವಿಚಾರದ ಅನುಭವ ಇಲ್ಲ ಎನ್ನುವುದು ಹೊಳೆಯಿತು. ಆದರೂ ಅವರು ಕೊಟ್ಟ ಔಷಧಗಳನ್ನೆಲ್ಲ ನುಂಗಿ ತಿಂಗಳ ಮೇಲೆ ಸಂಭೋಗಕ್ಕೆ ಮತ್ತೆ ಪ್ರಯತ್ನಿಸಿದೆ. ಪರಿಣಾಮ ಶೂನ್ಯವೇ ಆಗಿತ್ತು. ಇದರಿಂದ ಆಯುಷಿಗೆ ನಾನು ಅವಳ ಬಳಿಗೆ ಬರುವುದು ಅಂದರೆ ಒಂಥರಾ ಅಲರ್ಜಿಯೇ ಆದಂತಾಯಿತು. ಹತ್ತಿರವೇ ಇದ್ದರೂ ಎಷ್ಟೋ ಮೈಲು ದೂರ ಇರುವ ಭಾವವನ್ನು ನಾವು ಇಬ್ಬರೂ ಅನುಭವಿಸತೊಡಗಿದೆವು.

ಸುಮಾರು ಆರು ತಿಂಗಳ ಮೇಲೆ ನಮ್ಮ ಕೋರ್ಟಿನಲ್ಲಿ ವಿಚ್ಛೇದನದ ಪ್ರಕರಣವೊಂದು ದಾಖಲಾಯಿತು. ಮೊದಮೊದಲು ಜಿಲ್ಲಾ ಕೋರ್ಟಿನಲ್ಲಷ್ಟೇ ಇಂಥ ವಿಚ್ಛೇದನ ಪ್ರಕರಣಗಳನ್ನು ಇತ್ಯರ್ಥ ಮಾಡುವ ಅವಕಾಶ ಇರುತ್ತಿದ್ದರೆ ಈಗ ಯಾವ ಕೋರ್ಟುಗಳಲ್ಲೂ ಇದನ್ನು ನಡೆಸಬಹುದು ಎಂಬ ಮೇಲಿನ ಆದೇಶಕ್ಕೆ ಅನುಗುಣವಾಗಿ ನಾನು ಇರುವ ಕೋರ್ಟಿನಲ್ಲಿ ಇಂಥ ಪ್ರಕರಣಗಳು ದಾಖಲಾಗತೊಡಗಿತು. ನಾನು ಈ ಬಗ್ಗೆ ಸ್ವಲ್ಪ ಉತ್ಸಾಹಗೊಂಡು ಆ ಪ್ರಕರಣದ ಗಂಡಿನ ಕಡೆಯ ವಕೀಲರಾಗಿರುವ ನನ್ನ ಸೀನಿಯರ್ ರಾಮಚಂದ್ರರಾಯರಿದ್ದಲ್ಲಿಗೆ ಹೋಗಿ, 'ಸರ್, ಅದೇನು ವಿಚ್ಛೇದನದ ಪ್ರಕರಣ?' ಎಂದು ಮೆತ್ತಗೆ ಕೇಳಿದೆ. ಅವರು ನಗುತ್ತಾ 'ನಿನ್ನ ಕಡೆ ಇಂಥವರು ಯಾರಾದರೂ ಬಂದಿದ್ದಾರಾ?' ಎಂದು ಕೇಳಿದರು.

(ಸಶೇಷ)